## ಗೊಂಬೆಗಳ ಇತಿಹಾಸ ರೋಚಕ



‘ಮೈಸೂರು ಟಾಯ್ಸ್, ಮರೆಯಲಾಗದ ನೆನಪು (ಅ. 13, ಜಗನ್ನಾಥ ಪ್ರಕಾಶ್) ಲೇಖನ ಸೊಗಸಾಗಿದೆ. ನವರಾತ್ರಿಯಲ್ಲಿ ಮಾತ್ರ ಪೆಟ್ಟಿಗೆಯಿಂದ ಹೊರಬಂದು ಮತ್ತೆ ಪೆಟ್ಟಿಗೆ ಸೇರುವ ಅಂದದ ಗೊಂಬೆಗಳ ಹಿಂದಿನ ಇತಿಹಾಸ ರೋಚಕ. ಮೈಸೂರು ಟಾಯ್ಸ್‌ನ ರೂವಾರಿ ವೀರಪ್ಪನವರ ಕಲಾ ನೈಪುಣ್ಯ ಮತ್ತು ಪರಿಶ್ರಮವನ್ನು ಉತ್ತಮವಾಗಿ ಚಿತ್ರಿಸಲಾಗಿದ್ದು, ಮರೆಯಾಗುತ್ತಿರುವ ಬೊಂಬೆಗಳ ಮರೆಯಲಾಗದ ನೆನಪುಗಳು ಮುದ ನೀಡಿತು.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

## ಕಾಲ ಮಿಂಚಿಲ್ಲ...

ಏಳು ದಶಕಗಳ ಘನ ಇತಿಹಾಸವಿರುವ ಮೈಸೂರು ಬೊಂಬೆಗಳ ಬಗ್ಗೆ ಬರೆದ ಲೇಖನ ಸಂತೋಷ ನೀಡಿತು. ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ನಮ್ಮ ಕರಕುಶಲ ಕಲೆಗಳಂತಹ ಗುಡಿ ಕೈಗಾರಿಕೆಗಳು ಮರೆಯಾಗುತ್ತಿರುವುದು ವಿಷಾದನೀಯ. ಇನ್ನೂ ಕಾಲ ಮಿಂಚಿಲ್ಲ, ಚನ್ನಪಟ್ಟಣದ ಗೊಂಬೆಗಳ ಜೊತೆಗೆ ಮೈಸೂರು ಟಾಯ್ಸ್ ಉದ್ಯಮ ಮತ್ತೆ ಪುನರಾರಂಭ ಆಗುವ ನಿಟ್ಟಿನಲ್ಲಿ ಕಲಾವಿದ ವೀರಣ್ಣನವರ ಮೊಮ್ಮಗ ಕಾರ್ಯಪ್ರವೃತ್ತರಾಗಲಿ.

—ಎಂ.ಜೆ. ಅಭಿಷೇಕ್, ಬೆಂಗಳೂರು

## ಚೌಕಾಸಿ ಈಗ ಕಣ್ಮರೆಯಾಗುತ್ತಿದೆ...

‘ವ್ಯಾಪಾರಂ ಚೌಕಾಸಿ ಚಿಂತನಂ’ (ಅ. 13, ಶ್ರೀರಂಜನಿ ಅಡಿಗ) ಲೇಖನ ಮಾರ್ಮಿಕವಾಗಿದೆ. ಚೌಕಾಸಿ ಮಾಡುವುದು ಹೆಂಗಳೆಯರ ಜನ್ಮಸಿದ್ಧ ಹಕ್ಕು ಎಂದು ಬಿಂಬಿತವಾಗಿದ್ದು– ಹಣ್ಣು, ಹೂ, ತರಕಾರಿ ಬಳಿಯ ಚೌಕಾಸಿ ಎಂಬ ಇಬ್ಬರ ಮಾತಿನ ಸಂವಹನದ ರಸಮಯ ಗಳಿಗೆ ಈಗ ನಿಧಾನಕ್ಕೆ ಪೇಟಿಎಂ, ಜಿಪೇ, ಹೋಂ ಡೆಲಿವರಿಯಿಂದ ಕಣ್ಮರೆಯಾಗುತ್ತಿದೆ.

—ಭಾರತೀ ಗಂಗಾಧರ್. ಬೆಂಗಳೂರು

## ನೀಲಕುರಿಂಜಿ ಚೆಲುವು!

‘ಎಂಥ ಮರುಳಯ್ಯ ಇದು ಎಂಥಾ ಮರುಳು’ (ಅ. 13) ಎಂಬ ‘ನೀಲಕುರಿಂಜಿ’ ಹೂವಿನ ಬಗೆಗಿನ ಕೆ.ಎಸ್. ಶ್ರೀನಿವಾಸ ಅವರ ಲೇಖನ ಅತ್ಯಂತ ಸೊಗಸಾಗಿ ಮೂಡಿಬಂದಿದೆ. ನೀಲಕುರಿಂಜಿ ಹೂವಿನ ಅದ್ಭುತ ಸೌಂದರ್ಯವನ್ನು ಸವಿಯಲು ಲೇಖಕರು ಪಟ್ಟ ಶ್ರಮ ಹಾಗೂ ಕೊನೆಗೆ ಅನೇಕ ಪ್ರವಾಸಗಳ ನಂತರ ಅವರ ಈ ಹೆಬ್ಬಯಕೆ ಈಡೇರಿದ ಬಗೆಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಕ್ರಿಮಿಕೀಟಗಳೂ ಹೇಗೆ ಈ ನೀಲಕುರಿಂಜಿ ಸೌಂದರ್ಯದ ಮೋಹಕ್ಕೆ ಸಿಲುಕುತ್ತವೆ ಎಂಬ ಬಗ್ಗೆ ಸೆರೆಹಿಡಿದಿರುವ ಚಿತ್ರಗಳು ಸಾಕ್ಷ್ಯಯಾಗಿವೆ. ನಿಸರ್ಗದ ಅನೇಕ ನಿಗೂಢತೆಗಳ ಪೈಕಿ 12 ವರ್ಷಕ್ಕೊಮ್ಮೆ ಅರಳುವ ಈ ನೀಲಕುರಿಂಜಿಯ ಸೊಬಗು ನಿಸರ್ಗ ಪ್ರೇಮಿಗಳನ್ನು ವಿಸ್ಮಯ ಲೋಕಕ್ಕೆ ಕೊಂಡೊಯ್ಯುವಂತಿದೆ.



—ಜಿ.ಕೆ. ಕಂಚೀವರದಯ್ಯ, ಕೊಳಪಾಳ

ಹೂವಿನ ಚೆಲುವಿಗೆ ಮನಸೋತು ಅದನ್ನು ನೋಡಲೇಬೇಕೆಂದು ಲೇಖಕರು ಹರಸಾಹಸ ಪಟ್ಟದ್ದು ನೋಡಿ ಅಚ್ಚರಿಯಾಯಿತು. ನಿಸರ್ಗದ ಸೌಂದರ್ಯಕ್ಕೆ ಎಣೆಯುಂಟೇ?

—ಸಂತೇಬೆನ್ನೂರು ಛಾಯಶ್ರೀ, ಬೆಂಗಳೂರು

## ಮನೋಜ್ಞ ಬರಹ



‘ಬಾನ ದಾರಿಯಲ್ಲಿ...’ (ಅ. 13, ಗುರುರಾಜ್ ಎಸ್. ದಾವಣಗೆರೆ) ಮುಖಪುಟ ಲೇಖನ ಮನೋಜ್ಞವಾಗಿ ಮೂಡಿಬಂದಿದೆ ಮತ್ತು ವಿಸ್ತೃತ ವಿವರಗಳನ್ನೊಳಗೊಂಡಿದೆ. ಪುನೀತ್ ಉಪಗ್ರಹವನ್ನು ಮುಂದಿನ ದಿನಗಳಲ್ಲಿ ನಭಕ್ಕೇರಿಸುವ ಕಾರ್ಯದಲ್ಲಿ ಇಸ್ರೋ ಸಂಸ್ಥೆ ಜೊತೆ ಬೆಂಗಳೂರಿನ 200 ಶಾಲಾ/ಕಾಲೇಜು ವಿದ್ಯಾರ್ಥಿಗಳು ಕೈ ಜೋಡಿಸಿ ರುವುದು ಅವರ ವಿಜ್ಞಾನದ ವೃದ್ಧಿಗೆ ಬಹಳ ಸಹಕಾರಿಯಾಗಲಿದೆ. ಆಯ್ದ ಕೆಲವು ವಿದ್ಯಾರ್ಥಿ/ಶಿಕ್ಷಕ ಸಮುದಾಯದ ಶ್ರೀಹರಿಕೋಟಾದ ಉಡಾವಣಾ ನೆಲೆಗೆ ಹೋಗಿ ಕಣ್ತುಂಬಿಕೊಳ್ಳಲಿರುವ ಸಂಗತಿ ಅಭಿನಂದನಾರ್ಹ.

—ಜಿ. ಸುಬ್ರಹ್ಮಣ್ಯ, ಬೆಂಗಳೂರು

ಚುಮುಚುಮು ಬೆಳಕು ಹರಿಯುವಷ್ಟರಲ್ಲಿ ‘ಸುಧಾ’ ನಮ್ಮ ಮನೆ ಬಾಲ್ಕನಿ ಬಾಗಿಲಿಗೆ ದೈನಂದಿನ ಇತರೆ ಪತ್ರಿಕೆಗಳ ಜೊತೆಗೆ ಗುರಿ ಇಟ್ಟಂತೆ ಬಂದು ಬಡಿದು ಲ್ಯಾಂಡ್ ಆಯಿತು, ‘ಬಾನದಾರಿಯಲ್ಲಿ...’ ಕಥನವನ್ನು ಹೊತ್ತು ತಂದಿತು. ಬರಹದ ತಾಂತ್ರಿಕ ಮಾಹಿತಿ, ಸ್ವಾನುಭವದ ನಿರೂಪಣೆ ಮತ್ತು ಫೋಟೊಗ್ರಾಫ್ ಎಲ್ಲವೂ ಅತ್ಯಂತ ಸಮರ್ಪಕವಾಗಿ ಮೂಡಿಬಂದಿದೆ. ಪುನೀತ್ ಉಪಗ್ರಹದ ಉಡಾವಣೆಯ ಪೂರ್ವಭಾವಿಯಾಗಿ ಪ್ರಕಟಣೆಗೊಂಡಿರುವ ಈ ವಿಶೇಷ ಮುಖಪುಟ ಲೇಖನ ತುಂಬಾ ಮೌಲ್ಯಯುತ ಮತ್ತು ಉಪಯುಕ್ತ.

—ಕೆ.ಎಸ್. ರಾಜಾರಾಮ್, ಬೆಂಗಳೂರು

## ಚಿಕಿತ್ಸೆ ಸ್ವಾಗತಾರ್ಹ - ಶುಲ್ಕ?

ನವಜಾತ ಶಿಶುವಿನ ಹೃದಯ ಬಡಿತವನ್ನು ಸರಿಪಡಿಸಲೆಂದು ‘ಟೋಟಲ್ ಬಾಡಿ ಕೂಲಿಂಗ್’ (ಟಿಬಿಸಿ) ತಂತ್ರವನ್ನು ಬಳಸಿದ್ದರ ಬಗೆಗಿನ ಲೇಖನ (ಉಮಾ ಅನಂತ್, ಅ. 13) ಕುತೂಹಲಕಾರಿಯಾಗಿತ್ತು. ಆದರೆ ಆ ತಂತ್ರ ಏನೆಂಬುದರ ಬಗ್ಗೆ ವಿವರಗಳೇನೂ ಅದರಲ್ಲಿ ಇರಲಿಲ್ಲ. ಅದು ಹೀಗಿದೆ:

ಶಿಶು ಜನಿಸಿದ ನಾಲ್ಕು ಗಂಟೆಯೊಳಗೆ, ಒಂದು ಗಾಜಿನ ಪೆಟ್ಟಿಗೆಯಲ್ಲಿ ಅದನ್ನು ಅಂಗಾತ ಮಲಗಿಸುತ್ತಾರೆ. ಅದರ ಗುದದ್ವಾರದ ಮೂಲಕ ಒಂದು ತಂಪುನಾಳವನ್ನು ಐದು ಸೆಂಟಿಮೀಟರ್ ಒಳಕ್ಕೆ ತೂರಿಸುತ್ತಾರೆ. ಹಾಗೆಯೇ ಶಿಶುವಿನ ಭುಜ ಮತ್ತು ತಲೆಯ ಹಿಂಭಾಗದಲ್ಲಿ ಬರ್ಫದ ಪಟ್ಟಿಯನ್ನು ಇಟ್ಟಿರುತ್ತಾರೆ. ತಂಪುನಾಳಕ್ಕೆ ಸ್ವಿಚ್ ಹಾಕಿದಾಗ ಮೆಲ್ಲಗೆ ಶಿಶುವಿನ ಎಲ್ಲ ಅಂಗಾಂಗಗಳೂ ತಂಪಾಗತೊಡಗುತ್ತದೆ. ದೇಹದ ಸಹಜ ತಾಪಮಾನ 37 ಡಿಗ್ರಿ ಸೆ. ಇದ್ದುದು 34 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಾಗ ಚಿಕಿತ್ಸೆಯನ್ನು ನಿಲ್ಲಿಸುತ್ತಾರೆ. ತೀರ ಜಾಸ್ತಿ ಇದ್ದ ಹೃದಯಬಡಿತ (ನಿಮಿಷಕ್ಕೆ 250 ಬಾರಿ) ತುಸು ಕಡಿಮೆಯಾಗುತ್ತದೆ. ಹದಿನೈದು ನಿಮಿಷಗಳ ಅಂತರದಲ್ಲಿ ಹೀಗೇ ಮೂರು ನಾಲ್ಕು ಬಾರಿ ಇದೇ ಚಿಕಿತ್ಸೆಯನ್ನು ಕೊಟ್ಟಾಗ ಹೃದಯ ಬಡಿತ ಸಹಜ ಸ್ಥಿತಿಗೆ (ನಿಮಿಷಕ್ಕೆ ಸರಾಸರಿ 150 ಬಾರಿ) ಬರುತ್ತದೆ.

ಈ ಚಿಕಿತ್ಸಾ ವಿಧಾನವನ್ನು ಬೆಂಗಳೂರಿನಲ್ಲಿ ಮೊದಲ ಬಾರಿಗೆ ಜಾರಿಗೆ ತಂದ ವೈದ್ಯವೃಂದಕ್ಕೆ ಅಭಿನಂದನೆಗಳು. ಆದರೆ ಈ ಸರಳ ಚಿಕಿತ್ಸೆಗೆ ರೂ. 25–30 ಸಾವಿರ ಶುಲ್ಕವನ್ನು ಏಕೆ ವಿಧಿಸುತ್ತಾರೊ– ಅದನ್ನು ನಾವು ಕೇಳುವಂತಿಲ್ಲವಲ್ಲ!

—ಎಲ್.ಪಿ. ದಿವಾಕರ್, ಕೆಂಗೇರಿ

## ಮನಸ್ಸನ್ನು ಆರ್ದ್ರಗೊಳಿಸಿತು

ಮಂಡಲಗಿರಿ ಪ್ರಸನ್ನ ಅವರ ‘ಕವಲು ದಾರಿ ಕಥೆ’ (ಅ. 13) ಮನಸ್ಸನ್ನು ಆರ್ದ್ರಗೊಳಿಸಿತು. —ಅಶೋಕ ಎಚ್.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in